ಸಿ.ಸಿ ನಂಬ್ರ: 1112/2023

ಪಿ.ಡಬ್ಲ್ಯೂ : 1

ದಿನಾಂಕ: 09-04-2026 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಲಾಗಿದೆ

ಮುಂದುವರಿದ ಪಾಟೀ ಸವಾಲು: ಆರೋಪಿ ಪರ ಶ್ರೀ ಬಿ ಆರ್ ಎನ್ ವಕೀಲರಿಂದ

1. ದೂರನ್ನು ದಾಖಲಿಸುವಾಗ ಎಲ್ಲಾ ದಾಖಲೆಗಳು ಲಭ್ಯ ಇದ್ದ ಬಗ್ಗೆ ನನಗೆ ಗೊತ್ತಿರುತ್ತದೆ. ನಾನು ನ್ಯಾಯಲಯಕ್ಕೆ ಕೊಟ್ಟ ಪಾಸ್ ಬುಕ್ ನ್ನು ಯಾವಾಗ ಪಡೆದುಕೊಂಡಿದ್ದೆ ಎಂದು ನೆನಪಿರುವುದಿಲ್ಲ. ದೂರನ್ನು ದಾಖಲಿಸುವಾಗ ಪಾಸ್ ಬುಕ್ ನ ಎಂಟ್ರಿಗಳನ್ನು ನೋಡಿ ದಾಖಲಿಸಿರುತ್ತೇನೆ. ನನ್ನ ಖಾತೆಗೂ ಸಹ ನಿ.ಡಿ. 3 ರ ತರಹವೇ ಪಾಸ್ ಬುಕ್ ಲಭ್ಯ ಇರುತ್ತದೆ ಎಂದರೆ ಸರಿ. ನಾನು ಬ್ಯಾಂಕಿನಲ್ಲಿ ಬುಕ್ ನಲ್ಲಿ ಕೇಳಿರುವುದಿಲ್ಲ, ಸ್ಟೇಟ್ ಮೆಂಟ್ ಕೇಳಿರುತ್ತೇನೆ, ಅವರು ಕೊಟ್ಟಿರುತ್ತಾರೆ.

2. ಬ್ಯಾಂಕಿನಲ್ಲಿ ಹಣ ಹಾಕುವುದು, ಚೆಕ್ ಮುಖಾಂತರ ಹಣ ಕೊಡುವುದನ್ನು 2017 ರಿಂದಲೂ ಮಾಡಿರುತ್ತೇನೆ. ನಾನು ಅಂದಾಜು ಎಷ್ಟು ಜನಕ್ಕೆ ಚೆಕ್ ನ ಮೂಲಕ ಹಣ ಕೊಟ್ಟಿದ್ದೇನೆ ಎಂಬುದನ್ನು ಹೇಳಲು ಸಾಧ್ಯ ಇರುವುದಿಲ್ಲ, ನನ್ನ ಹೇಳಿಕೆಯಲ್ಲಿ ನಮೂದು ಇರುತ್ತದೆ. ಪಾಸ್ ಬುಕ್ ನಲ್ಲಿ ಅಕೌಂಟ್ ನ ಎಲ್ಲಾ ಮಾಹಿತಿಗಳು ಇರುತ್ತದೆ ಎಂದರೆ ಸರಿ. ಅದರಲ್ಲಿ ಒಪನಿಂಗ್ ಡೇಟ್ ಸಹ ನಮೂದು ಇರುತ್ತದೆ ಎಂದರೆ ಸರಿ. ನಿ.ಡಿ. 3 ರಲ್ಲಿ ಒಪನಿಂಗ್ ಡೇಟ್ ಇರುವುದು ದಿನಾಂಕ 06-06-2018 ರಂದು ಎಂದರೆ ಸರಿ.

3. ನಾನು ಜನವರಿ 2018 ರಿಂದ ಆತನಿಗೆ ಹಣವನ್ನು ಕೊಟ್ಟಿರುತ್ತೇನೆ. ನಾನು ಎಲ್ಲಾ ಹಣವನ್ನು ಆತನಿಗೆ ಚೆಕ್ ಮುಖಾಂತರ ಕೊಟ್ಟಿರುತ್ತೇನೆ, 2 -3 ಬಾರಿ ಆರ್.ಟಿ .ಜೆ.ಎಸ್‌ನ ಮುಹಾಂತರ ಪಾವತಿ ಆಗಿರುತ್ತದೆ. ಎಷ್ಟು ಹಣ ಆರ್.ಟಿ .ಜೆ.ಎಸ್ ನ ಮುಖಾಂತರ ವರ್ಗಾವಣೆ ಆಗಿದೆ ಎಂದು ಗೊತ್ತಿರುವುದಿಲ್ಲ. ಖಾತೆ ಅಸ್ತಿತ್ವದಲ್ಲಿ ಇಲ್ಲದಿದ್ದರೆ ದುಡ್ಡು ಹಾಕಲು ಬರುವುದಿಲ್ಲ ಎಂದರೆ ಸರಿ. ನಾನು ಬ್ಯಾಂಕಿನ ಸ್ಟೇಟ್ ಮೆಂಟ್ ನ್ನು ನೋಡಿ ದೂರು ಸಲ್ಲಿಸಿರುತ್ತೇನೆ. ನಾನು ಲೆಕ್ಕ ಮಾಡಿದಂತೆ ಚೆಕ್ ನಲ್ಲಿ ನಮೂದಿಸಿದ ಹಣಕ್ಕೂ ಹಾಗೂ ನಾನು ಪಿರ್ಯಾದಿಯಲ್ಲಿ ಕೊಟ್ಟೆ ಎಂದು ಹೇಳಲಾದ ಬ್ಯಾಂಕಿನ ಹೇಳಿಕೆಯಲ್ಲಿನ ಮೊತ್ತಕ್ಕೂ ಸ್ವಲ್ಪ ವ್ಯತ್ಯಾಸ ಇರುತ್ತದೆ ಎಂದು ನುಡಿಯುತ್ತಾರೆ. ನಾನೇ ಲೆಕ್ಕವನ್ನು ಮಾಡಿರುತ್ತೇನೆ.

4. ನಾನು ದೂರು ದಾಖಲಿಸುವಾಗ ನನ್ನ ಪಾಸ್ ಬುಕ್ ನ್ನು ವಕೀಲರು ಕೇಳಿರುವುದಿಲ್ಲ. ಸಾಕ್ಷಿ ಪುನಃ ನನ್ನ ವಕೀಲರು ಸ್ಟೇಟ್ ಮೆಂಟ್ ಕೇಳಿದ್ದು ಎಂದು ನುಡಿಯುತ್ತಾರೆ. ನಾನು ಅದನ್ನು ವಕೀಲರ ಬಳಿ ಕೊಟ್ಟಿರುತ್ತೇನೆ. ಅದನ್ನು ನ್ಯಾಯಲಯಕ್ಕೆ ಹಾಜರು ಪಡಿಸಿರುತ್ತಾರೆ ಎಂದು ನುಡಿಯುತ್ತಾರೆ. ನಾನು ಈ ಪ್ರಕರಣದಲ್ಲಿ ಪ್ರತಿ ಬಾರಿಯೂ ಪ್ರತಿ ಪ್ರಶ್ನೆಗೆ ಬೇರೆ ಬೇರೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

5. ನಿ.ಡಿ. 3 ರಂತೆ ದಿನಾಂಕ 06-06-2018 ರಂತೆ ಖಾತೆ ಒಪನ್ ಆದ ಹಾಗೆ ಕಂಡು ಬರುತ್ತದೆ ಎಂದರೆ ಸರಿ. ಖಾತೆ ನಾನೇ ಒಪನ್ ಮಾಡಿಸಿರಬಹುದು, ಆದರೆ ನಾನು ಜನವರಿ 2018 ರಿಂದ ಆತನಿಗೆ ಹಣವನ್ನು ಕೊಡುತ್ತಿದ್ದೆ ಎಂದು ನುಡಿಯುತ್ತಾರೆ. ಪಾಸ್ ಬುಕ್ ನಲ್ಲಿ ಚೆಕ್ ನ ನಮೂದು ಆಗಬೇಕು ಎಂದರೆ ಸರಿ. ಖಾತೆ ಒಪನ್ ಆದ ಮೇಲೆ ದಿನಾಂಕ 23-01-2018, ದಿನಾಂಕ 21-02-2018, ದಿನಾಂಕ 09-03-2018, ದಿನಾಂಕ 28-03-2018, ದಿನಾಂಕ 25-04-2018, ದಿನಾಂಕ 05-05-2018, ದಿನಾಂಕ 23-03-2018, ದಿನಾಂಕ 04-06-2018 ಕ್ಕೆ ಹಣ ಪಾವತಿ ಆಗಿರುತ್ತದೆ ಎಂದರೆ ಸರಿ. ಇವೆಲ್ಲವೂ ದಿನಾಂಕ 06-06-2018 ರ ಪೂರ್ವದಲ್ಲಿ ಎಂದರೆ ಸರಿ.

6. ನಾನು ಆತನ ಖಾತೆ ಒಪನ್ ಆಗುವ ಪೂರ್ವದಲ್ಲಿಯೇ ಹಣ ಹಾಕಿದ್ದೆ ಎಂದು ಸುಳ್ಳು ಸಾಧನೆ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ, ಸಾಕ್ಷಿ ನಾನು ಅವರಿಗೆ ಚೆಕ್ ಕೊಟ್ಟಿರುತ್ತೇನೆ, ಅವನು ಹಣವನ್ನು ವಿತ್ ಡ್ರಾ ಮಾಡಿಕೊಂಡಿರುತ್ತಾನೆ ಎಂದು ನುಡಿಯುತ್ತಾರೆ. ನಾನು ದೂರಿನಲ್ಲಿ ಈ ವಿಚಾರವನ್ನು ಹೇಳಿರುತ್ತೇನೆ. ಖಾತೆಗೆ ಹಣವನ್ನು ಹಾಕಬೇಕಾದರೆ ಚೆಕ್ ನ್ನು ಕೊಟ್ಟರೆ ಯಾರ ಹೆಸರಿನಲ್ಲಿ ಚೆಕ್ ಇರುತ್ತದೋ, ಆ ಹೆಸರೇ ಪಾಸ್ ಬುಕ್ ನಲ್ಲಿ ನಮೂದು ಆಗುತ್ತದೆ ಎಂದರೆ ಸರಿ. ಅದೇ ಹೆಸರನ್ನು ನಾನು ದೂರಿನಲ್ಲಿ ನಮೂದಿಸಬೇಕು ಎಂದರೆ ಸರಿ.

7. ನಾನು ದೂರಿನಲ್ಲಿ ನಮೂದಿಸಿರುವ ಹೆಸರುಗಳು ಪಾಸ್ ಬುಕ್ ನಲ್ಲಿ 18 ರಿಂದ 19 ಇರಬಹುದು, ಈಗ ನೆನಪಿರುವುದಿಲ್ಲ ಎಂದು ನುಡಿಯುತ್ತಾರೆ. ಕೆ ಚಂದ್ರರವರ ಹೆಸರು ಬಿಟ್ಟು ಬೇರೆಯವರ ಹೆಸರು ಇದ್ದರೆ, ಅದು ಆರೋಪಿಗೆ ಸಂಬಂಧಿಸಿರುವುದಿಲ್ಲ ಎಂದು ನಾನು ಒಪ್ಪುತ್ತೇನೆ. ನಾನು ಚೆಕ್ ನ್ನು ಕೊಟ್ಟ ನಂತರ ಅವರೇ ಬ್ಯಾಂಕಿಗೆ ಹೋಗಿರುತ್ತಾರೆ, ನಾನು ಹೋಗಿರುವುದಿಲ್ಲ. ಚೆಕ್ ನ ಮುಖಾಂತರ ಹಣ ಪಾವತಿ ಆಗಬೇಕಾದರೆ ಬ್ಯಾಂಕಿನವರು ಚೆಕ್ ನ ಹಿಂಭಾಗದಲ್ಲಿ ಹೆಸರನ್ನು ಪಡೆದುಕೊಳ್ಳುತ್ತಾರೆ ಎಂದರೆ ಸರಿ. 49 ಸಾವಿರಕ್ಕಿಂತ ಹೆಚ್ಚಿನ ಹಣವನ್ನು ವರ್ಗಾವಣೆ ಆಗಬೇಕಾದರೆ ಪಾನ್ ಕಾರ್ಡ್ ಬೇಕಾಗುತ್ತದೆ ಎಂದರೆ ಸಾಕ್ಷಿ ನನಗೆ ಆ

ವಿಚಾರ ಸರಿಯಾಗಿ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಹಾಗೆ ಕೊಟ್ಟಂತಹ ಚೆಕ್ ಗಳೆಲ್ಲಾ ನನ್ನದೇ ಇರುತ್ತದೆ.

8. ಕೆ. ಚಂದ್ರನನ್ನು ಬಿಟ್ಟು ನಾನು ಹಾಜರು ಪಡಿಸಿದ ಸ್ಟೇಟ್ ಮೆಂಟ್ ನಲ್ಲಿ ಸುಮಾರು 350 ರಿಂದ 360 ಎಂಟ್ರಿಗಳು ಬೇರೆಯವರ ಹೆಸರಿನಲ್ಲಿ ಪಾವತಿ ಆಗಿದ ಬಗ್ಗೆ ಕಂಡು ಬರುತ್ತದೆ ಎಂದರೆ ಸರಿ. ಅದು ಪಿಶ್ ನ ಬಾಬ್ತು ಕೊಟ್ಟ ಹಣವಾಗಿರುತ್ತದೆ. ಸ್ಟೇಟ್ ಮೆಂಟ್ ನಲ್ಲಿ ಆ ರೀತಿಯ ವ್ಯವಹಾರ ಎಂದು ತೋರಿಸಿರುತ್ತಾರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಹೇಗೆ ಕೆ.ಚಂದ್ರನ ಹೆಸರು ನಮೂದಾಗಿದೆಯೋ ಹಾಗೆ ಬೇರೆಯವರ ಹೆಸರು ನಮೂದು ಇರುತ್ತದೆ ಎಂದರೆ ಸರಿ. ಸತೀಶ್ ವಿಠಲ ಪೂಜಾರಿ ಎಂದು ಕೆಲವೊಂದು ಎಂಟ್ರಿಗಳು ನನ್ನ ಹೆಸರಿನಲ್ಲಿಯೇ ಪಾಸ್ ಆದ ಹಾಗೆ ಕಂಡು ಬರುತ್ತದೆ ಎಂದರೆ ಸರಿ.

9. ಹರೀಶ್ ಪೂಜಾರಿ ನನ್ನ ಬಾವ. 14 ರಿಂದ 15 ಎಂಟ್ರಿ ಗಳು ಹರೀಶ್ ಪೂಜಾರಿಯವರ ಹೆಸರಿನಲ್ಲಿ ಕಂಡು ಬರುತ್ತದೆ ಎಂದರೆ ಸಾಕ್ಷಿ ಇರಬಹುದು, ನಾನು ಹಣ ಕೊಟ್ಟಿದ್ದೆ ಎಂದು ನುಡಿಯುತ್ತಾರೆ. ಅದೇ ರೀತಿ ಹರೀಶ್ ಪೂಜಾರಿಯವರು ನನ್ನ ರೀತಿ ಚೆಕ್ ನ ಪ್ರಕರಣವನ್ನು ದಾಖಲಿಸಿರುತ್ತಾರೆ ಎಂದರೆ ಸರಿ. ಸಾಕ್ಷಿ ಅವರು ಚೆಕ್ ಹಾಕಿ ತೆಗೆಯುತ್ತಾರೆ ಎಂದು ನುಡಿಯುತ್ತಾರೆ. ಸದರಿ ಹೇಳಿಕೆಯಲ್ಲಿ ಸುಮಾರು 204 ರಿಂದ 206 ಎಂಟ್ರಿಗಳು ಬೈ ಕ್ಯಾಶ್ ಎಂದು ಇರುತ್ತದೆ ಎಂದರೆ ಸರಿ. ನಾನು ಸಾಕ್ಷಿ ಹೇಳಲು ಬಂದಿರುತ್ತೇನೆ ಎಂದರೆ ಸರಿ. ಬೈ ಕ್ಯಾಶ್ ಎಂದು ನಮೂದು ಇರುವುದು ನಾನೇ ಕೊಟ್ಟಿರುತ್ತೆನೋ ಅಥವಾ ಬೇರೆಯವರು ಹಾಕಿರುತ್ತಾರೋ ಎಂಬುದರ ಬಗ್ಗೆ ಸರಿಯಾಗಿ ನೆನಪಿಗೆ ಬರುತ್ತಿಲ್ಲ, ಕೆಲವರು ಕ್ಯಾಶ್ ಕೇಳಿದರೆ ನಾನೇ ಕೊಟ್ಟಿರಬಹುದು ಎಂದು ನುಡಿಯುತ್ತಾರೆ.

10. ನಾನು ಹೇಳಿದಂತೆ ಸದರಿ ಸ್ಟೇಟ್ ಮೆಂಟ್ ನಲ್ಲಿ ಮೀನಿನ ವ್ಯವಹಾರಕ್ಕೆ ಸಂಬಂಧಪಟ್ಟಂತೆ ಯಾವುದೇ ಕಂಪೆನಿಗಳ ಹಾಗೂ ವ್ಯಕ್ತಿಯ ಹೆಸರು ನಮೂದು ಇರುವುದಿಲ್ಲ ಎಂದರೆ ಸರಿ. ಒ.ಡಿ ಪೆಸಿಲಿಟಿ ಪಡೆದುಕೊಂಡಿದ್ದು ಮೀನು ವ್ಯವಹಾರಕ್ಕೆ ಅಂತ ಎಂದರೆ ಸರಿ. ಆ ರೀತಿ 1 ಕೋಟಿಗೂ ಹೆಚ್ಚಿನ ಹಣವನ್ನು ತೆಗೆದುಕೊಂಡಿರುತ್ತೇನೆ. ನಾನು ಹಾಜರು ಪಡಿಸಿದ ಪಾಸ್ ಬುಕ್ ನಲ್ಲಿ ಇರುವ ನಮೂದುಗಳು ಎಲ್ಲಾ ವ್ಯಯಕ್ತಿಕ ಎಂಟ್ರಿಗಳು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಈ ಎಲ್ಲಾ ವ್ಯವಹಾರವನ್ನು ಬೇನಾಮಿಯಾಗಿ ಅವ್ಯವಹಾರ ನಡೆಸುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇ ರೀತಿ ಚಂದ್ರ ಹಾಗೂ ಕೆ. ಚಂದ್ರ ಎಂದು ನಮೂದು ಮಾಡಿಕೊಂಡು ನಾನೇ ಹಣವನ್ನು ತೆಗೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಬ್ಯಾಂಕಿನಲ್ಲಿ

ಸಹಿ ಇರುತ್ತದೆ ಎಂದು ನುಡಿಯುತ್ತಾರೆ. ನಾನು ಹಾಜರು ಪಡಿಸಿರುವ ಚೆಕ್ ಗಳು ಬ್ಯಾಂಕಿನಲ್ಲಿ ಇರುತ್ತದೆ ಎಂದರೆ ಸರಿ.

ಈ ಸಂದರ್ಭದಲ್ಲಿ ಆರೋಪಿ ಪರ ವಕೀಲರು **91** ರ ಅರ್ಜಿಯನ್ನು ಸಲ್ಲಿಸಿದ್ದರಿಂದ ಪಾಟೀ ಸವಾಲನ್ನು ಮೂಂದೂಡಲಾಯಿತು.

ಓ.ಹೇ.ಕೇ.ಸ.ಇದೆ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಗಿದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಕುಂದಾಪುರ